# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 868 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.03.2020. |
| ಉತ್ತರಿಸುವ ಸಚಿವರು | : | ಉಪಮುಖ್ಯಮಂತ್ರಿ<br>ಲೋಕೋಪಯೋಗಿ ಮತ್ತು<br>ಸಮಾಜ ಕಲ್ಯಾಣ ಇಲಾಖೆ |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ರಲ್ಲಿ ಹುಬ್ಬಳ್ಳಿಯ ಗಬ್ಬೂರು ಕ್ರಾಸ್‌ನಿಂದ ಧಾರವಾಡ ನರೇಂದ್ರ ಕ್ರಾಸ್‌ವರೆಗೆ ಬೈಪಾಸ್ ರಸ್ತೆಯನ್ನುಎಂದು ಮಂಜೂರು ಮಾಡಲಾಯಿತು; (ವರ್ಷ ಮತ್ತು ದಿನಾಂಕ ನೀಡುವುದು) | ಹುಬ್ಬಳ್ಳಿಯ ಗಬ್ಬೂರು ಕ್ರಾಸ್‌ನಿಂದ ಧಾರವಾಡ ನರೇಂದ್ರ ಕ್ರಾಸ್‌ವರೆಗೆ ರಾಷ್ಟ್ರೀಯ ಹೆದ್ದಾರಿ 4 ಕ್ಕೆ ಸರಪಳಿ ಕಿಮೀ.403.80 ರಿಂದ ಕಿ.ಮೀ.433.20 ರವರೆಗೆ BOT ಆಧಾರದ ಮೇಲೆ ಬೈಪಾಸ್ ನಿರ್ಮಾಣಕ್ಕಾಗಿ ದಿನಾಂಕ: 05-02-1998 ರಂದು ಕರಾರು ಮಾಡಲಾಗಿದೆ. |
| (ಆ) | ಸದರಿ ರಸ್ತೆಯ ಗುತ್ತಿಗೆಯನ್ನು ಯಾರಿಗೆ ನೀಡಲಾಯಿತು; ಇದನ್ನು ಮುಗಿಸಲು ನೀಡಲಾದ ಅವಧಿ ಎಷ್ಟು; (ತಿಂಗಳು/ ವರ್ಷಗಳು ಗುತ್ತಿಗೆದಾರರ ವಿವರ ನೀಡುವುದು) | ಸದರಿ ರಸ್ತೆಯ ನಿರ್ಮಾಣವನ್ನು ಮೆ॥ ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ವಹಿಸಿದ್ದು, ನಿರ್ಮಾಣ ಅವಧಿ 2 ವರ್ಷಗಳು. ಕಾಮಗಾರಿ ದಿನಾಂಕ: 24.10.2000 ರಂದು ಪೂರ್ಣಗೊಂಡಿದೆ. ಸುಂಕ ವಸೂಲಾತಿ ಪ್ರಾರಂಭಿಸಿದ್ದು, 05-05-2024 ಕ್ಕೆ ಕೊನೆಗೊಳ್ಳಲಿದೆ. |
| (ಇ) | ಸದರಿ ರಸ್ತೆಯಲ್ಲಿ ಟೋಲ್ ಮೂಲಕ ಹಣ ಸಂಗ್ರಹ ಮಾಡಲಾಗುತ್ತಿದ್ದು, ಎಷ್ಟು ತಿಂಗಳು/ವರ್ಷಗಳವರೆಗೆ ಇರುತ್ತದೆ; ಈಗಾಗಲೇ ಸಂಗ್ರಹಿಸಲಾದ ಹಣ ಎಷ್ಟು; | ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯನ್ನು BOT ಆಧಾರದ ಮೇಲೆ ಮೆ॥ ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ದಿನಾಂಕ: 06-05-1998 ರಿಂದ 05-05-2024 (26 ವರ್ಷಗಳು) ರಸ್ತೆ ಶುಲ್ಕ ಸಂಗ್ರಹಿಸಲು ನೀಡಲಾಗಿದೆ. ಮೆ॥ ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್, ಹುಬ್ಬಳ್ಳಿ ಇವರು ತಿಳಿಸಿದಂತೆ ಈಗಾಗಲೇ ಸಂಗ್ರಹಿಸಿರುವ ಮೊತ್ತ ರೂ.579,24,83,855/- ಗಳಾಗಿರುತ್ತವೆ. |
| (ಈ) | ಸದರಿ ರಸ್ತೆಯು ಕೇವಲ ಸಿಂಗಲ್ ಲೈನ್‌ದಾಗಿದ್ದು, ಪ್ರತಿ ದಿನ ಅಪಘಾತಗಳು ಸಂಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ರಸ್ತೆಯು 2 lane with paved shoulders ಇದ್ದು 10.00 ಮೀ. ಅಗಲದ carriage way ಇರುತ್ತದೆ. ಸದರಿ ರಸ್ತೆಯಲ್ಲಿ ಸಂಭವಿಸುತ್ತಿರುವ ಅಪಘಾತಗಳ ಬಗ್ಗೆ ಗಮನಕ್ಕೆ ಬಂದಿರುತ್ತದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಉ) | ಬಂದಿದ್ದಲ್ಲಿ, ಇದನ್ನು ನಾಲ್ಕು/ಆರು ಲೈನುಗಳ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಕೇಂದ್ರ ಭೂಸಾರಿಗೆ ಸಚಿವಾಲಯದ ಮಾರ್ಗಸೂಚಿಯಂತೆ ರಾಷ್ಟ್ರೀಯ ಹೆದ್ದಾರಿಯನ್ನು 4/6 ಪಥಗಳನ್ನಾಗಿಸುವ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನಿರ್ವಹಿಸಬೇಕಿದ್ದು, ಸದರಿ ರಸ್ತೆಯನ್ನು ನಾಲ್ಕು/ಆರು ಪಥಗಳ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಯ ವಿಸ್ತೃತ ಯೋಜನಾ ವರದಿ ತಯಾರಿಕೆಯನ್ನು NHAI ರವರ ವತಿಯಿಂದ ಕೈಗೊಳ್ಳಲಾಗಿದೆ. |
| (ಊ) | ಈ ರಸ್ತೆಯಲ್ಲಿ ಸಂಚರಿಸುವ ಅಮಾಯಕರ ಸಾರ್ವಜನಿಕರ ಸಾವು-ನೋವಿಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ? | ಸದರಿ ರಸ್ತೆಯಲ್ಲಿ ಅಪಘಾತವನ್ನು ತಡೆಗಟ್ಟಲು ಎಲ್ಲಾ ರೀತಿಯಲ್ಲೂ ರಸ್ತೆ ಸುರಕ್ಷತಾ ಕ್ರಮಗಳನ್ನು ಅಳವಡಿಸುವಂತೆ ನಿರ್ದೇಶನ ನೀಡಲಾಗಿದೆ.<br>ಅಧೀಕ್ಷಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳ ವೃತ್ತ, ಧಾರವಾಡ, ಇವರು ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ನಿರ್ವಹಣೆ ಮತ್ತು ಸುರಕ್ಷತೆಯ ಬಗ್ಗೆ ಮೆ: ನಂದಿ ಹೈವೇ ಡೆವಲಪರ್ಸ್ ಇವರಿಗೆ ದಿನಾಂಕ:29.10.2018, 21.12.2018, 29.02.2019 ಮತ್ತು 12.04.2019 ರಂದು ನೋಟೀಸ್‌ಗಳನ್ನು ನೀಡಿರುತ್ತಾರೆ.<br>ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ಸುರಕ್ಷತೆ ಕುರಿತು ಸಮೀಕ್ಷೆ ಮಾಡಲು ಸದರಿ ರಸ್ತೆಯನ್ನು ಎರಡು ಬಾರಿ ದಿನಾಂಕ: 13.11.2018 ಮತ್ತು 31.03.2019 ರಲ್ಲಿ ಸೇಫ್ಟಿ ಅಡಿಟ್ ಮಾಡಿಸಲಾಗಿದ್ದು, ಅದರಲ್ಲಿ ನಮೂದಿಸಿರುವ ನ್ಯೂನತೆಗಳನ್ನು ಸರಿಪಡಿಸಲು ಮೆ: ಎನ್.ಹೆಚ್.ಡಿ.ಎಲ್. ರವರಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಮುಖ್ಯಇಂಜಿನಿಯರ್ ರವರಿಂದ ವರದಿ ಸ್ವೀಕೃತಿಯಾದ ನಂತರ ಮುಂದಿನ ಕ್ರಮ ವಹಿಸಲಾಗುವುದು.<br>ಸದರಿ ರಸ್ತೆಯನ್ನು 4/6 ಪಥಗಳನ್ನಾಗಿಸುವ ಸಲುವಾಗಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು NHAI ವತಿಯಿಂದ ಕೈಗೊಳ್ಳಲಾಗುತ್ತಿದೆ. |

ಕಡತ ಸಂಖ್ಯೆ: ಲೋಇ 65 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ